

# ಹಂಪಿ ಎಕ್ಸ್‌ಪ್ರೆಸ್

**ಭಾರತದ ಯುವ ಚೆಸ್ಸಿಗರಿಗೆ ದೊಡ್ಡಕ್ಕನಂತಿರುವ ಕೋನೇರು ಹಂಪಿ ಈಗ 'ರ್‍ಯಾಪಿಡ್ ಚೆಸ್ ವಿಶ್ವ ಚಾಂಪಿಯನ್'. ಈ ಮೂಲಕ ವಿಶ್ವ ಚೆಸ್ ನಕಾಶೆಯಲ್ಲಿ ಭಾರತದ ಮತ್ತೊಂದು ಯಶಸ್ಸಿನ ಹೆಜ್ಜೆಗುರುತು.**

■ **ಪ್ರಮೋದ ಕುಲಕರ್ಣಿ**

ಭಾರತದ ಕ್ರೀಡಾ ಜಗತ್ತಿಗೆ ಅನೇಕ ಸ್ಮರಣೀಯ ನೆನಪುಗಳನ್ನು ಹಾಗೂ ಸಾಧನೆಯ ಬೆಳ್ಳಿಚುಕ್ಕಿಗಳನ್ನು 2024 ನೀಡಿದೆ. ವರ್ಷಾರಂಭದಿಂದ ವರ್ಷಾಂತ್ಯದ ತನಕವೂ ವಿಶ್ವದ ಚೆಸ್ ನಕಾಶೆಯಲ್ಲಿ ಭಾರತದ ಚದುರಂಗದ ಚತುರರು ರಾರಾಜಿಸಿದ್ದಾರೆ.

ಭಾರತದ ಮಹಿಳಾ ಚೆಸ್ ಲೋಕದ ಹಳೆಯ ಗಟ್ಟಿ ಬೇರು ಕೋನೇರು ಹಂಪಿ 2025ರ ಸ್ವಾಗತದ ಹೊಸ್ತಿಲಲ್ಲಿ ಹೊಸ ಚಿಗುರು ಅರಳಿಸಿದ್ದಾರೆ. ತಮ್ಮ 15ನೇ ವಯಸ್ಸಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ದೇಶದ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆ ಹೊಂದಿದ್ದ ಹಂಪಿ 'ರ್‍ಯಾಪಿಡ್ ಚೆಸ್ ವಿಶ್ವ ಚಾಂಪಿಯನ್' ಪಟ್ಟ ಅಲಂಕರಿಸಿದ್ದಾರೆ.

ಚೆಸ್, ಬುದ್ಧಿಗೆ ಕಸರತ್ತು ಕೊಡುವ ಕೌಶಲ ಹಾಗೂ ಚಾಕಚಕ್ಯತೆಯಿಂದ ನಿರ್ಧಾರ ತೆಗೆದುಕೊಳ್ಳಬೇಕಾದ ಆಟ. ಇದಕ್ಕೆ ವಯಸ್ಸು ವಿಷಯವೇ ಅಲ್ಲ. ಆದರೆ ಗ್ರ್ಯಾಂಡ್‌ಮಾಸ್ಟರ್ ಆದ 17 ವರ್ಷಗಳ ಬಳಿಕವೂ ಮೊದಲಿನ ತಾಳ್ಮೆ ಉಳಿಸಿಕೊಂಡು ಆಡುವ ಆಟದ ಕೌಶಲಕ್ಕೆ ಈಗ ಮತ್ತೊಂದು ಪ್ರಶಸ್ತಿಯ ಗರಿ ಸೇರ್ಪಡೆಯಾಗಿದೆ.

ಮಗಳಲ್ಲಿ ಚೆಸ್ ಬಗ್ಗೆ ಪ್ರೀತಿ ಬೆಳೆಸಿದ್ದು ಅವರ ತಂದೆ ಕೋನೇರು ಅಶೋಕ್. ಚೆಸ್ ಆಟಗಾರರಾಗಿದ್ದ ಅಶೋಕ್ ತಾವು ಕಲಿತ ವಿದ್ಯೆಯನ್ನು ಮಗಳಿಗೂ ಹೇಳಿಕೊಟ್ಟರು. ಆರನೇ ವಯಸ್ಸಿನಲ್ಲಿ ಮಗಳನ್ನು ಸ್ಥಳೀಯ ಟೂರ್ನಿಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಆರಂಭಿಕ ದಿನಗಳಲ್ಲಿಯೇ 10 ವರ್ಷದ ಒಳಗಿನವರ ರಾಷ್ಟ್ರೀಯ ಟೂರ್ನಿಯಲ್ಲಿ ಚಾಂಪಿಯನ್ ಆದರು. 2001ರಲ್ಲಿ ವಿಶ್ವ ಜೂನಿಯರ್ ಬಾಲಕಿಯರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿಯೂ ಹಂಪಿ ಅವರಲ್ಲಿನ ಆಟದ ಸಾಮರ್ಥ್ಯ ಅನಾವರಣವಾಯಿತು.

ಕೋನೇರು ಹಂಪಿ ಈಗ ಎರಡನೇ ಬಾರಿಗೆ ಫಿಡೆ ಮಹಿಳಾ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿ ಈ ಸಾಧನೆ ಮಾಡಿದ ಜಗತ್ತಿನ ಎರಡನೇ ಆಟಗಾರ್ತಿ ಎನ್ನುವ ದಾಖಲೆ ಬರೆದಿದ್ದಾರೆ. 2019ರಲ್ಲಿ ಮೊದಲ ಬಾರಿಗೆ ಜಾರ್ಜಿಯಾದಲ್ಲಿ ಈ ಸಾಧನೆ ಮಾಡಿದ್ದರು. ಚೀನಾದ ಜು ವೆನ್‌ಜುನ್ ಮಾತ್ರ ಈ ಹಿಂದೆ ಎರಡು ಬಾರಿ ಚಾಂಪಿಯನ್ ಆದ ಸಾಧನೆ ಹೊಂದಿದ್ದಾರೆ.

ಕಲಿಕೆಯ ಆರಂಭದ ವರ್ಷಗಳಿಂದಲೂ ಹಂಪಿ ಪದಕಗಳನ್ನು ಬೇಟೆಯಾಡುತ್ತಲೇ ಬಂದಿದ್ದಾರೆ. 1997, 1998 ಮತ್ತು 2000ರಲ್ಲಿ ವಿಶ್ವ ಯುವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಜಯಿಸಿದ್ದರು. 1999ರಲ್ಲಿ ಏಷ್ಯನ್ ಯೂತ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 12 ವರ್ಷದೊಳಗಿನ ವಿಭಾಗದಲ್ಲಿ ಪದಕ ಪಡೆದಿದ್ದರು.

2000 ಮತ್ತು 2002ರಲ್ಲಿ ಬ್ರಿಟಿಷ್ ಮಹಿಳಾ ಚಾಂಪಿಯನ್‌ಷಿಪ್, 2003ರಲ್ಲಿ ಏಷ್ಯನ್ ಮಹಿಳಾ ವೈಯಕ್ತಿಕ ಚಾಂಪಿಯನ್‌ಷಿಪ್ ಹೀಗೆ ಅನೇಕ ಪ್ರಶಸ್ತಿಗಳು ಬಂದಿವೆ. ಐದು ವರ್ಷಗಳ ಹಿಂದೆ ಮಾತೃತ್ವದ ಕಾರಣಕ್ಕಾಗಿ ಎರಡು ವರ್ಷ ವಿರಾಮ ಪಡೆದು ಮರಳಿದ ನಂತರ ವಿಶ್ವ ರ್‍ಯಾಪಿಡ್ ಟೂರ್ನಿಯಲ್ಲಿ ಚಾಂಪಿಯನ್ ಎನಿಸಿದರು. ಈ ಎಲ್ಲ ಸಾಧನೆಗಾಗಿ ಪ್ರತಿಷ್ಠಿತ ಅರ್ಜುನ ಪ್ರಶಸ್ತಿ, ಪದ್ಮಶ್ರೀ ಗೌರವ ಲಭಿಸಿವೆ.

ನಿರಂತರವಾಗಿ ಟೂರ್ನಿಗಳಲ್ಲಿ ಪಾಲ್ಗೊಳ್ಳುತ್ತಿದ್ದರೂ ಗೆಲುವಿನ ಖುಷಿಯಷ್ಟೇ ಸೋಲುಗಳ ನೋವನ್ನೂ ಹಂಪಿ ಅನುಭವಿಸಿದ್ದಾರೆ. 2024ರ ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕ ಗೆದ್ದು ಚಾರಿತ್ರಿಕ ಸಾಧನೆ ಮಾಡಿದ್ದ ಅವರಿಗೆ ಭಾರತ ತಂಡದಲ್ಲಿ ಸ್ಥಾನವೇ ಲಭಿಸಿರಲಿಲ್ಲ. ಹೀಗಾಗಿ 37 ವರ್ಷದ ಕೋನೇರು ಹಂಪಿ ವಿಶ್ವ ರ್‍ಯಾಪಿಡ್ ಟೂರ್ನಿಯಲ್ಲಿ ಗೆಲ್ಲುವ ಅಚ್ಚುಮೆಚ್ಚಿನ ಸ್ಪರ್ಧಿಯೂ ಆಗಿರಲಿಲ್ಲ. 'ನಾನು ಅನೇಕ ಪಂದ್ಯಗಳಲ್ಲಿ ಹೀನಾಯವಾಗಿ ಸೋತಿದ್ದೇನೆ' ಎಂದು ಅವರೇ ಒಪ್ಪಿಕೊಂಡಿದ್ದರು. ಆದರೆ ಗೆಲುವಿನ ಪ್ರಯತ್ನ ಮಾತ್ರ ನಿರಂತರವಾಗಿತ್ತು.

'ಯಶಸ್ಸು ಎಂದರೆ ಕೇವಲ ಪಂದ್ಯಾವಳಿ ಅಥವಾ ಪದಕ ಗೆಲ್ಲುವುದಲ್ಲ. ಜೀವನದಲ್ಲಿಯೂ ಯಶಸ್ವಿಯಾಗಬೇಕು ಎಂದು ನಾನು ನಂಬುತ್ತೇನೆ. ನೀವು ಎಲ್ಲವನ್ನೂ ನಿರ್ವಹಿಸಲು ಶಕ್ತರಾಗಿರಬೇಕು. ನನ್ನ ಕುಟುಂಬದ ಬೆಂಬಲದೊಂದಿಗೆ ನಾನು ಮತ್ತೆ ಗೆಲ್ಲಲು ಸಾಧ್ಯವಾಯಿತು' ಎಂದು ಹಂಪಿ ಆಡಿರುವ ಪ್ರೇರಣಾದಾಯಕ ಮಾತುಗಳು ಯಶಸ್ಸಿಗೆ ವ್ಯಾಖ್ಯಾನದಂತಿವೆ.

ಚದುರಂಗ ಲೋಕದಲ್ಲಿ ಭಾರತದ ಅನೇಕ ಸ್ಪರ್ಧಿಗಳು ಛಾಪು ಮೂಡಿಸಿದ್ದಾರೆ. ಅರ್ಜುನ್ ಇರಿಗೇಶಿ, ಡಿ. ಗುಕೇಶ್, ವಿಶ್ವನಾಥನ್ ಆನಂದ್, ಕೋನೇರು ಹಂಪಿ, ಆರ್. ಪ್ರಜ್ಞಾನಂದ, ಹರಿಕಾ ದ್ರೋಣವಳ್ಳಿ, ನಿಹಾಲ್ ಸ್ಯಾರಿನ್, ವೈಶಾಲಿ ರಮೇಶಬಾಬು, ದಿವ್ಯಾ ದೇಶಮುಖ್, ಹೀಗೆ ದೊಡ್ಡ ಪಟ್ಟಿಯೇ ಬೆಳೆಯುತ್ತದೆ. ಹೊಸ ಪ್ರತಿಭೆಗಳಲ್ಲಿನ ಸಾಮರ್ಥ್ಯ ನಿತ್ಯ ಅನಾವರಣವಾಗುತ್ತಲೇ ಇದೆ. ಭಾರತದ ಗ್ರ್ಯಾಂಡ್‌ಮಾಸ್ಟರ್ ಗುಕೇಶ್ ದೊಮ್ಮರಾಜು 18 ವರ್ಷ ವಯಸ್ಸಿನಲ್ಲೇ ವಿಶ್ವ ಚೆಸ್ ಚಾಂಪಿಯನ್ ಪಟ್ಟಕ್ಕೆ ಏರಿ ಇತಿಹಾಸ ಸೃಷ್ಟಿಸಿ ಅತಿ ಕಿರಿಯ ವಿಶ್ವ ಚಾಂಪಿಯನ್ ಎನ್ನುವ ಹಿರಿಮೆಗೆ ಪಾತ್ರರಾಗಿದ್ದಾರೆ.

ಚೆಸ್ ಆಡುವ ಶಕ್ತಿಕೇಂದ್ರ ರಾಷ್ಟ್ರಗಳಾಗಿ ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನಗಳನ್ನು ಹೊಂದಿರುವ ರಷ್ಯಾ, ಅಮೆರಿಕ ಹಾಗೂ ಚೀನಾದ ನಂತರ ಭಾರತವಿದೆ. ಭಾರತದ ಹಳೆಯ ಬೇರುಗಳು ಹಾಗೂ ಹೊಸ ಚಿಗುರು ನಿರಂತರವಾಗಿ ಚಿಗುರುತ್ತಲೇ ಇದ್ದರೆ, ರಷ್ಯಾ ಪಡೆದಿರುವ ಅಗ್ರಸ್ಥಾನ ಸಂಪಾದಿಸುವ ಹಾದಿ ಭಾರತಕ್ಕೆ ದೂರವೇನಿಲ್ಲ.

ಪ್ರತಿಕ್ರಿಯಿಸಿ: feedback@sudha.co.in